2-72 (193)

## ಕರ್ನಾಟಕ ವಿಧಾನ ಪರಿಷತ್

**ಶ್ರೀ ಹೆಚ್.ಎಂ. ರಮೇಶ್‌ಗೌಡ ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರ ನಿಯಮ 72ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.**

**ಪ್ರಶ್ನೆ:-**

ಕಲಬುರಗಿ ಜಿಲ್ಲಾಧಿಕಾರಿಗಳ ಆದೇಶ ಸಂ. ಜಂ.ನಿ/ಸಕಇ/ವಿಘಯೋ/ಕನಪ್ರ/ಸಿಆರ್./2018-19 ದಿನಾಂಕ:11.07.2019 ರಲ್ಲಿ 2018-19ನೇ ಸಾಲಿನ ಕಾಲೋನಿ ಅಭಿವೃದ್ಧಿ ಯೋಜನೆ/ಪ್ರಗತಿ ಕಾಲೋನಿ ಯೋಜನೆ ಅಡಿಯಲ್ಲಿ ಕಲಬುರಗಿ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಪರಿಶಿಷ್ಟ ಪಂಗಡದ ಜನರು ವಾಸಿಸುತ್ತಿರುವ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳ ಕಾಮಗಾರಿಗಳನ್ನು ಕೈಗೊಳ್ಳಲು ಬೇರೆ ಯೋಜನೆಗಳಿಗೆ ಜಂಟಿ ಖಾತೆಯಲ್ಲಿ ಲಭ್ಯವಿದ್ದ ರೂ.ಕೋಟಿ ಅನುದಾನವನ್ನು ಉಪಯೋಗಿಸಿಕೊಂಡು ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಚೆಕ್ ಸಂ:371836 ರಂತೆ ದಿನಾಂಕ:11.07.2019 ರಂತೆ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಕಲಬುರಗಿ ಇವರಿಗೆ ಬಿಡುಗಡೆಗೊಳಿಸಿ ಆದೇಶ ಮಾಡಿದ್ದು, ಒಂದು ವರ್ಷದ ಹಿಂದೆ ಸರ್ಕಾರದ ಗಮನಕ್ಕೆ ತರದೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಆದೇಶ ಹೊರಡಿಸಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:-**

ಸರ್ಕಾರದ ಆದೇಶ ಸಂಖ್ಯೆ: ಸಕಇ 77 ಎಸ್‌ಎಲ್‌ಪಿ 2019 ದಿನಾಂಕ 22.02.2019ರ ಸರ್ಕಾರದ ಆದೇಶದಲ್ಲಿ ಕಲಬುರಗಿ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ರೂ.600.00 ಲಕ್ಷಗಳು ಮಂಜೂರಾಗಿದ್ದು, ಈ ಕಛೇರಿ ಆದೇಶ ಸಂಖ್ಯೆ:ಪವಕನಿ/ಪಪಂಉಯೋ/ಸಿಆರ್-1/18-19 ದಿ:28.05.2019ರಲ್ಲಿ ಕಲಬುರಗಿ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ರೂ.600.00 ಲಕ್ಷಗಳು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಜಂಟಿ ಖಾತೆಗೆ ಬಿಡುಗಡೆ ಮಾಡಲು ಆದೇಶಿಸಲಾಗಿತ್ತು.

ಸದರಿ ವೆಚ್ಚವನ್ನು ಪಿ.ಡಿ. ಖಾತೆಯಲ್ಲಿ ವಿವಿಧ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಮೊತ್ತದಲ್ಲಿ ಉಳಿಕೆಯಾಗಿರುವ ರೂ.24.24 ಕೋಟಿ ಹಾಗೂ ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳ ಜಂಟಿ ಖಾತೆಯಲ್ಲಿ ಲಭ್ಯವಿರುವ ರೂ.37.25 ಕೋಟಿಗಳನ್ನು ಸೇರಿ ಒಟ್ಟು ರೂ.61.49 ಕೋಟಿಗಳನ್ನು ಮತ್ತು ಲೆಕ್ಕಶೀರ್ಷಿಕೆ:4225-02-794-0-01 ಯಲ್ಲಿ ರೂ.76.00 ಕೋಟಿಗಳನ್ನು ಸೇರಿಸಿ ಒಟ್ಟು ರೂ. 137.49 ಕೋಟಿಗಳು ಹಾಗೂ ಸರ್ಕಾರದಿಂದ ಪ್ರಗತಿ ಕಾಲೋನಿ ಯೋಜನೆಗೆ ಮರು ಹಂಚಿಕೆ ಮಾಡಿದ ಅನುದಾನ ರೂ.30.00 ಕೋಟಿಗಳು ಸೇರಿ ಒಟ್ಟಾರೆ ರೂ.167.49 ಕೋಟಿಗಳಲ್ಲಿ ಭರಿಸತಕ್ಕದ್ದು ಎಂದು ಆದೇಶಿಸಲಾಗಿತ್ತು. ಆದರೆ ಸದರಿ ಆದೇಶದನ್ವಯ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.

ದಿನಾಂಕ:13.02.2019 ಮತ್ತು 08.03.2019 ರ ಸರ್ಕಾರದಿಂದ ಪ್ರಗತಿ ಕಾಲೋನಿ ಯೋಜನೆಗೆ ಮರು ಹಂಚಿಕೆ ಮಾಡಿದ ರೂ.30.00 ಕೋಟಿಗಳನ್ನು ಅನುಷ್ಠಾನಾಧಿಕಾರಿಗಳಿಗೆ ಮರು ಬಿಡುಗಡೆ ಮಾಡುವ ಕುರಿತು ಹೊರಡಿಸಿದ ಆದೇಶವನ್ನು ಹಿಂಪಡೆದು ಸರ್ಕಾರದ ಆದೇಶ ಸಂಖ್ಯೆ: ಸಕಇ 29 ಎಸ್‌ಎಲ್‌ಪಿ 2019 ದಿನಾಂಕ:20.07.2019ರಲ್ಲಿ ಪರಿಷ್ಕರಿಸಿ ಸರ್ಕಾರ ಆದೇಶ ಹೊರಡಿಸಲಾಗಿದೆ. ಈ ಕಛೇರಿ ಪತ್ರ ಸಂಖ್ಯೆ:ಪವಕನಿ:ಇಡಿ-2:ಸಿಆರ್-02/2018-19 ದಿ:14.10.2019ರ ಸರ್ಕಾರದ ಆದೇಶವನ್ನು ಅನುಷ್ಠಾನಗೊಳಿಸುವ ಸಂಬಂಧ ಸರ್ಕಾರದ ಸೂಕ್ತ ಆದೇಶ ಕೋರಲಾಗಿತ್ತು. ಸರ್ಕಾರ ಆದೇಶ ಸಂಖ್ಯೆ:ಸಕಇ 156 ಎಸ್‌ಟಿಪಿ 2019, ದಿನಾಂಕ:05.08.2020ರ ಆದೇಶವನ್ನು ಮತ್ತೊಮ್ಮೆ ದಿನಾಂಕ:05.08.2019 ರ ಆದೇಶದಲ್ಲಿ ಮಾರ್ಪಡಿಸಿ ಆದೇಶಸಿರುವಂತೆ ಈ ಕಛೇರಿ ಆದೇಶ ಸಂಖ್ಯೆ: ಪವಕನಿ/ಪಪಂಉಯೋ/ಸಿಆರ್-1

/18-19 ದಿ:05.11.2020 ರಲ್ಲಿ ಕಲಬುರಗಿ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ರೂ.600.00 ಲಕ್ಷಗಳು ಈ ಪೈಕಿ ಮೊದಲನೇ ಕಂತಿನಲ್ಲಿ ರೂ.450.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

2018-19ನೇ ಸಾಲಿನಲ್ಲಿ ಕಾಲೋನಿ ಅಭಿವೃದ್ಧಿ ಯೋಜನೆ/ಪ್ರಗತಿ ಕಾಲೋನಿ ಯೋಜನೆ ಅಡಿ ಕಲಬುರಗಿ ಜಿಲ್ಲೆಯ ಕಲಬುರಗಿ ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಮಂಜೂರಾದ ರೂ.600.00 ಲಕ್ಷಗಳಲ್ಲಿ ಕಲಬುರಗಿ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಪರಿಶಿಷ್ಟ ಪಂಗಡ ಜನರು ವಾಸಿಸುತ್ತಿರುವ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ ಕಲಬುರಗಿ ರವರು ಸಿದ್ಧಪಡಿಸಿರುವ ರೂ.600.00ಲಕ್ಷಗಳಲ್ಲಿ (16) ಕಾಮಗಾರಿಗಳಿಗೆ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನ ಶೇ.50% ರೂ.300.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳ ನಡವಳ ಆದೇಶ ಸಂಖ್ಯೆ:ಜಂ.ನಿ/ಸಕಇಕ/ವಿಘಯೋ/ಕನಪ್ರ/ಸಿಆರ್ /2018-19 ದಿನಾಂಕ:11.07.2019ರಲ್ಲಿ ಜಿಲ್ಲಾಧಿಕಾರಿಗಳ ನಡವಳ ಆದೇಶದಂತೆ ಅನುದಾನ ಬಿಡುಗಡೆಯಾಗುವ ಪೂರ್ವದಲ್ಲಿ ನಿರ್ಮಾಣ ಏಜೆನ್ಸಿಗೆ ಶೇ50% ರಷ್ಟು ಅಂದರೆ ರೂ.300.00 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತಾರೆ.

ಈ ಕಛೇರಿ ಕಾರಣ ಕೇಳ ನೋಟಿಸ್ ಸಂಖ್ಯೆ:ಪವಕನಿ/ಪಪಂಉಯೋ/ಸಿಆರ್-1/2020-21 ದಿನಾಂಕ:05.02.2021ರಲ್ಲಿ ಉದ್ದೇಶಿತ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆ ಮಾಡದಿದ್ದರು ಸಹ ಕೇಂದ್ರ ಕಛೇರಿ ಅನುಮತಿ ಇಲ್ಲದೇ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲು ಜಿಲ್ಲಾಧಿಕಾರಿಗಳು ಹಾಗೂ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರ ಜಂಟಿ ಖಾತೆಯಲ್ಲಿ ಲಭ್ಯವಿರುವ ಮೊತ್ತದಲ್ಲಿ ಮೂಲಭೂತ ಸೌಕರ್ಯಗಳ ಒದಗಿಸುವ ಕಾಮಗಾರಿಗಳನ್ನು ಅನುಷ್ಠಾನಗೊಳಸಲು ನಿರ್ಮಾಣ ಏಜೆನ್ಸಿಗೆ ಶೇ50% ರಷ್ಟು ಅನುದಾನ ಬಿಡುಗಡೆ ಮಾಡಿ ಕರ್ತವ್ಯ ಲೋಪವೆಸಗಿರುವ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದೆಂದು ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಕಲಬುರಗಿ ಜಿಲ್ಲೆ ರವರಿಗೆ ಕಾರಣ ಕೇಳ ನೋಟಿಸ್ ನೀಡಲಾಗಿರುತ್ತದೆ.

ಬೇರೆ ಯೋಜನೆಗಳಿಗೆ ಬಿಡುಗಡೆಯಾದ ಅನುದಾನವನ್ನು ಪ್ರಗತಿ ಕಾಲೋನಿ ಯೋಜನೆಯ ಕಾಮಗಾರಿಗಳಿಗೆ ವಿನಿಯೋಗ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ವಿಚಾರಣೆ ನಡೆಸಿ ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂಬಂಧಪಟ್ಟ ಅಧಿಕಾರಿಯವರಿಂದ ಸೂಕ್ತ ವಿವರಣೆ ಪಡೆದು ತಪ್ಪಿತಸ್ಥರೆಂದು ಕಂಡುಬಂದ ಪಕ್ಷದಲ್ಲಿ ಸದರಿಯವರ ವಿರುದ್ಧ ಕ್ರಮಜರುಗಿಸಲಾಗುವುದು. ಹಾಗೂ ಬೇರೆ ಯೋಜನೆಗಳಿಂದ ಬಳಸಿಕೊಂಡಿರುವ ಅನುದಾನವನ್ನು ಮರು ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಮುಂದುವರೆದು ಸದರಿ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸರ್ಕಾರದಿಂದ ಕೂಡಲೇ ನಿರ್ದೇಶನವನ್ನು ನೀಡಲಾಗುವುದು

ಸಕಇ 115 ಎಸ್‌ಟಿಪಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು